ದಿನಾಂಕ 26-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಯು.ಎಸ್.ಕೆ., ವಕೀಲರಿಂದಃ

7. ನಿಪಿ.5 ವಿಭಾಗ ಪತ್ರದ ಪ್ರಕಾರ ಶೇಷಿ ಪೂಜಾರ್ತಿಯವರಿಗೆ ಯಾವೆಲ್ಲ ಆಸ್ತಿಗಳು ಬಂದಿವೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಸಾಕ್ಷಿ, ಅವು ಶೇಷಿ ಪೂಜಾರ್ತಿಯವರ ಸ್ವಂತ ಆಸ್ತಿ ಅಲ್ಲ ಎನ್ನುತ್ತಾರೆ. ಸದರಿ ಆಸ್ತಿ ಭೂ ನಾಯ ಮಂಡಳಿಯಿಂದ ಕುಟುಂಬದ ಪರವಾಗಿ ಬಂದಿರುವುದರಿಂದ ವಿಭಾಗ ಮಾಡಿಕೊಳ್ಳಲು ಸಾಧ್ಯವಿಲ್ಲ. ನನ್ನ ಪ್ರಕಾರ ಶೇಷಿ ಪೂಜಾರ್ತಿಯವರಿಗೆ ಅನ್ಯಾಯ ಆಗಿರುತ್ತದೆ. ನಿಪಿ.5 ನ್ನು ಶೇಷಿ ಪೂಜಾರ್ತಿ ಓದಿ ನೋಡಿ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿ, ಅವರಿಗೆ ವಿದ್ಯಾಭ್ಯಾಸ ಇರಲಿಲ್ಲ ಹಾಗೂ ಆಸ್ತಿಯ ಬಗ್ಗೆ ಮಾಹಿತಿ ಇರಲಿಲ್ಲ ಎನ್ನುತ್ತಾರೆ.

8. ನಿಪಿ.5 ರ ಕುರಿತಂತೆ ನನ್ನ ತಂದೆಯನ್ನು ಹೊರತುಪಡಿಸಿ ಕುಟುಂಬದ ಬೇರೆ ಯಾವ ಸದಸ್ಯರು ಕೂಡ ತಕರಾರು ಮಾಡಿಲ್ಲ ಎಂದರೆ ಸರಿ. ದಾವಾ ತಪಶೀಲು 7 ನೇ ಆಸ್ತಿ ಸರ್ವೆ ನಂಬ್ರ.241/2 ಎ ಸರಕಾರದಿಂದ ಮಂಜೂರಾದ ದರ್ಖಾಸ್ತು ಆಸ್ತಿ ಎಂದರೆ ಸರಿಯಲ್ಲ. ನಿಪಿ.5 ರ ಪೂರ್ವದಲ್ಲಿ ಬಾಯ್ದೆರೆ ಒಡಂಬಡಿಕೆ ಆಗಿತ್ತು ಎಂದರೆ ನೆನಪಿಗೆ ಬರುತ್ತಿಲ್ಲ. ನಿಪಿ.5 ವಿಭಾಗ ಪತ್ರಕ್ಕೆ ಕೂಕ್ರ ಪೂಜಾರಿಯವರ ಎಲ್ಲಾ ವಾರೀಸುದಾರರು ಪಕ್ಷಗಾರರಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯನ್ನು ಬಿಟ್ಟಿದ್ದರು. ನಿಪಿ.5 ರ ಮಾಹಿತಿ ಬಂದ ನಂತರ 2015 ಡಿಸೆಂಬರ್ ನಲ್ಲಿ ವಕೀಲರ ಮೂಲಕ ನೊಟೀಸು ನೀಡಿರುತ್ತೇನೆ. ಸದರಿ ಸಮಯ ಪಹಣಿ ಪತ್ರಿಕೆ ತೆಗೆಯುವಾಗ ನಿಪಿ.5 ರ ಬಗ್ಗೆ ಗೊತ್ತಾಯಿತು.

9. ಶೇಷಿ ಪೂಜಾರ್ತಿಯವರು 1 ನೇ ಪ್ರತಿವಾದಿಯ ಪರವಾಗಿ ಎಲ್ಲಾ ಆಸ್ತಿಗಳನ್ನು ವ್ಯವಸ್ಥಾ ಪತ್ರದ ಮೂಲಕ ಬರೆದುಕೊಟ್ಟಿದ್ದಾರೆ. ನಿಪಿ.6 ರಿಂದ 13 ರ ಪ್ರಕಾರ ಕ್ರಯಕ್ಕೆ ಪಡೆದ ವ್ಯಕ್ತಿಗಳು ದಾವಾ ಆಸ್ತಿಗಳ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿ. ಸಾಕ್ಷಿ, ಸದರಿ ದಾಖಲೆಗಳು

ಸರಿ ಇಲ್ಲ ಎಂದು ನಾನು ಸಾಧಿಸುತ್ತಿದ್ದೇನೆ ಎನ್ನುತ್ತಾರೆ. ಸದರಿ ಆಸ್ತಿಗಳಲ್ಲಿ ಒಟ್ಟು 05 ಪ್ರತಿವಾದಿಯರ ಮನೆ ಕಟ್ಟಿಕೊಂಡಿರುತ್ತಾರೆ. ಅವರು ಯಾವಾಗಲಿನಿಂದ ಸದರಿ ಆಸ್ತಿಯಲ್ಲಿ ಸ್ವಾ ಧೀನ ಪಡೆದು ಮನೆ ಕಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.5 ರ ಆಧಾರದಲ್ಲಿ ತಯಾರಿಸಲ್ಪಟ್ಟ ನಂತರದ ವಿಲೇವಾರಿ ದಾಖಲೆಗಳು ಕ್ರಮಬದ್ಧವಾಗಿವೆ ಎಂದರೆ ಸರಿಯಲ್ಲ.

10. ನಿಪಿ.5 ರ ಆಧಾರದಲ್ಲಿ ತನ್ನ ಪಾಲಿಗೆ ಬಂದ ಆಸ್ತಿಗಳನ್ನು ಶೇಷಿ ಪೂಜಾರ್ತಿ ಸ್ವಂತ ಬೇಸಾಯ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ಬಾಡಿಗೆ ಮನೆಯಲ್ಲಿ ವಾಸವಿದ್ದರು. ನಮಗೆ ಪಾಲು ಇಲ್ಲ ಎಂದು ನಮ್ಮನ್ನು ಮನೆಯಿಂದ ಹೊರಗಡೆ ಹಾಕಿದ್ದರು. ಹಾಗಾಗಿ ಬಾಡಿಗೆ ಮನೆಯಲ್ಲಿ ವಾಸವಿದ್ದೆವು. ಕೂಕ್ರ ಪೂಜಾರಿಯ ವಾರೀಸುದಾರರು ನಿಪಿ.5 ರ ವಿಭಾಗ ಪತ್ರದ ನಂತರ ತಮ್ಮ ಪ್ರತ್ಯೇಕ ಸ್ವಾಧೀನತೆಯನ್ನು ಹೊಂದಿರುತ್ತಾರೆ ಎಂದರೆ ಸಾಕ್ಷಿ, ನಿಪಿ.5 ರ ಸರಿ ಇಲ್ಲ ಎನ್ನುತ್ತಾರೆ. ಕೂಕ್ರ ಪೂಜಾರಿಯ ವಾರೀಸುದಾರರು ಪ್ರತ್ಯೇಕ ಪ್ರತ್ಯೇಕವಾಗಿ ವಾಸವಿದ್ದಾರೆ ಎಂದರೆ ಸರಿ. ಅವರು ಪ್ರತ್ಯೇಕವಾಗಿದ್ದ ವಿಷಯ ನಮ್ಮ ಗಮನಕ್ಕೆ ಬಂದಿರಲಿಲ್ಲ. ನಿಪಿ.5 ರ ಬಗ್ಗೆ ತಿಳುವಳಿಕೆ ಇದ್ದರೂಾ ನನ್ನ ತಂದೆಗೆ ಹಕ್ಕು ಇಲ್ಲದ ಕಾರಣ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ.

11. ನನ್ನ ತಂದೆ ಕುಟುಂಬದ ಖರ್ಚಿಗೆ ಹಣ ಕೊಡುತ್ತಿದ್ದ ಬಗ್ಗೆ ನನಗೆ ತಿಳಿಸುತ್ತಿದ್ದರು, ದಾಖಲೆ ಇಲ್ಲ. ನನ್ನ ತಂದೆ ಯಾವುದೇ ರೀತಿ ಕುಟುಂಬದ ಖರ್ಚು ನೋಡಿಕೊಳ್ಳುತ್ತಿರಲಿಲ್ಲ ಹಾಗೂ 1 ನೇ ಪ್ರತಿವಾದಿಯೇ ನನ್ನ ವಿದ್ಯಾಭ್ಯಾಸದ ಖರ್ಚನ್ನು ಭರಿಸಿದ್ದರು ಹಾಗೂ ಕುಟುಂಬದ ಖರ್ಚು ವೆಚ್ಚ ನೋಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಸಂಪಾದನೆ ಅವರ ಖರ್ಚಿಗೆ ಸಾಕಾಗುತ್ತಿರಲಿಲ್ಲ ಎಂದರೆ ಸರಿಯಲ್ಲ.

12. 1 ನೇ ಪ್ರತಿವಾದಿಯ ಪರವಾಗಿ ರಾಜೀ ಪಂಚಾತಿಕೆ ನಡೆಸಲು ಶಂಕರ ಶೆಟ್ಟಿ ಹಾಗೂ ಚಂದ್ರಶೇಖರ ಶೆಟ್ಟಿ ಎನ್ನುವವರು ಬಂದಿದ್ದರು. ದಿನಾಂಕ 26-10-2016 ರಂದು ಒಪ್ಪಿಗೆ ಪತ್ರಕ್ಕೆ ಸಹಿ ಪಡೆಯಲು ಬಂದಿದ್ದರು. ಸದರಿ ಪತ್ರಕ್ಕೆ ನನ್ನ ತಂದೆ ಸಹಿ ಮಾಡಿರುವುದಿಲ್ಲ.

ಸದರಿ ಚಂದ್ರಶೇಖರ ಶೆಟ್ಟಿ ಮೃತ ಪಟ್ಟಿದ್ದು, ಇನ್ನೋರ್ವ ಶಂಕರ ಶೆಟ್ಟಿಯವರನ್ನು ಸಾಕ್ಷಿದಾರರನ್ನಾಗಿ ಕರೆಯಿಸಬಹುದು. ವಕೀಲರ ನೋಟೀಸು ಕಳುಹಿಸಿದ ನಂತರ ಶಂಕರ ಶೆಟ್ಟಿಯವರ ಮೂಖಾಂತರ ರೂಪಾಯಿ ತೊಂಬತ್ತು ಲಕ್ಷವನ್ನು ಕೊಡುವುದಾಗಿ ಪ್ರತಿವಾದಿಯರು ತಿಳಿಸಿದ್ದರು. ನಾನು ಹೇಳುವಂತೆ 1 ನೇ ಪ್ರತಿವಾದಿ ಯಾವುದೇ ರೀತಿ ರಾಜಿ ಬಗ್ಗೆ ಪ್ರಸ್ತಾಪಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಅಳಿಯ ಸಂತಾನದ ಕುಟುಂಬದ ಆಸ್ತಿ ಎಂದು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.5 ರಿಂದ 7 ದಾಖಲಾತಿಗಳನ್ನು ಶೇಷಿ ಪೂಜಾರ್ತಿ ಸ್ವಇಚ್ಚೆಯಿಂದ ತಯಾರಿಸಿರುತ್ತಾಳೆ ಎಂದರೆ ಸರಿಯಲ್ಲ. ಸದರಿಯವರ ಇಚ್ಚೆಯನ್ನು ವಿಚಾರಿಸಿ ಉಪನೋಂದಾವಣಾಧಿಕಾರಿ ನೋಂದಾವಣಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಶೇಷಿ ಪೂಜಾರ್ತಿಯವರಿಗೆ ಸದರಿ ಆಸ್ತಿಗಳನ್ನು ವಿಲೇವಾರಿ ಮಾಡುವ ಹಕ್ಕು ಇತ್ತು ಎಂದರೆ ಸರಿಯಲ್ಲ.

13. ನಾನು 1 ನೇ ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರವನ್ನು ಓದಿ ನೋಡಿರುತ್ತೇನೆ. ದಾವಾ ಆಸ್ತಿಯಲ್ಲಿ ನನ್ನ ತಂದೆಗೆ ಹಾಗೂ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಿಪಿ.5 ರ ಬಗ್ಗೆ ಮಾಹಿತಿ ಇದ್ದರೂ 2017 ರ ತನಕ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ಶೇಷಿ ಪೂಜಾರ್ತಿ 2004 ರಲ್ಲಿ ಮೃತ ಪಟ್ಟಿರುತ್ತಾರೆ. ಸದರಿಯವರ ಜೀವಿತ ಕಾಲದಲ್ಲಿ ನಿಪಿ.5 ರಿಂದ 7 ರ ಬಗ್ಗೆ ನಾವು ಯಾವುದೇ ಆಕ್ಷೇಪ ಸಲ್ಲಿಸಿಲ್ಲ ಎಂದರೆ ಸಾಕ್ಷಿ, ಆ ಬಗ್ಗೆ ನಮಗೆ 2015 ರಲ್ಲಿ ಮಾಹಿತಿ ಸಿಕ್ಕಿತು ಎನ್ನುತ್ತಾರೆ. ನಿಪಿ.8 ಹಾಗೂ 10 ದಾಖಲೆಗಳಿಗೆ ಶೇಷಿ ಪೂಜಾರ್ತಿ ಆಕ್ಷೇಪ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ, ಶೇಷಿ ಪೂಜಾರ್ತಿ ಅನಕ್ಷರಸ್ಥೆಯಾದ ಕಾರಣ ಆಕೆಗೆ ಗೊತ್ತಾಗಿರಲಿಕ್ಕಿಲ್ಲ ಎನ್ನುತ್ತಾರೆ. ನಿಪಿ.1 ರಿಂದ 15 ರ ಬಗ್ಗೆ ನಮಗೆ ಆಕ್ಷೇಪ ವ್ಯಕ್ತಪಡಿಸಲು ಹಕ್ಕು ಇಲ್ಲ ಎಂದರೆ ಸರಿಯಲ್ಲ.

14. ನನ್ನ ತಂದೆ ವರ್ಷದಲ್ಲಿ 2-3 ಬಾರಿ ಊರಿಗೆ ಭೇಟಿ ನೀಡುತ್ತಿದ್ದರು. ಅವರು ಊರಿಗೆ ಬಂದಾಗ ಕುಟುಂಬದ ವಿಷಯಗಳನ್ನು ಸದಸ್ಯರ ಬಳಿ ತಿಳಿದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಆಸ್ತಿಗಳ ಬಗ್ಗೆ ಅವರು ಮಾತನಾಡುತ್ತಿರಲಿಲ್ಲ, ಬೇರೆ ವಿಷಯ

ಮಾತನಾಡುತ್ತಿರಬಹುದು. ನಾನು ಹೇಳುವಂತೆ ದಾವಾ ಆಸ್ತಿಯಿಂದ ಯಾವುದೇ ಉತ್ಪತ್ತಿ ಬರುವುದಿಲ್ಲ ಎಂದರೆ ಸರಿಯಲ್ಲ.

15. ನನ್ನ ತಂದೆ ದಾವೆ ಸಲ್ಲಿಸುವ ಸಮಯ ಈ ವ್ಯಾಜ್ಯದ ಬಗ್ಗೆ 2015ರಲ್ಲಿ ತಿಳಿಸಿರುತ್ತಾರೆ. ಈ ದಾವೆಯನ್ನು ಸಲ್ಲಿಸಲು ವಕೀಲರಿಗೆ ನಾನು ಹಾಗೂ ನನ್ನ ತಂದೆ ಮಾಹಿತಿ ನೀಡಿದ್ದೆವು. ನಿಶಾನೆಗೊಳಪಡಿಸಿದ ದೃಢೀಕೃತ ದಾಖಲೆಗಳನ್ನು ನಾನು ಹಾಗೂ ನನ್ನ ತಂದೆ ದಾವೆ ಪೂರ್ವ ತೆಗೆಸಿರುತ್ತೇವೆ. ನಾವು ಉದ್ದೇಶಪೂರಕವಾಗಿ ವಾಯ್ದೆಯೊಳಗಾಗಿ ದಾವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಅಳಿಯ ಸಂತಾನದ ಕುಟುಂಬದ ಆಸ್ತಿ ಎನ್ನುವ ಬಗ್ಗೆ ಈಗಾಗಲೇ ಹಾಜರುಪಡಿಸಿರುವ ದಾಖಲಾತಿ ಹೊರತುಪಡಿಸಿ ಬೇರೆ ದಾಖಲೆಗಳು ನಮ್ಮ ಬಳಿ ಇಲ್ಲ.

16. ದಾವಾ ಆಸ್ತಿಗಳನ್ನು ಕೂಕ್ರ ಪೂಜಾರಿಯ ಹೆಂಡತಿ ಅಬ್ಬಕ್ಕ ಪೂಜಾರ್ತಿ ಗೇಣಿಗೆ ವಹಿಸಿ ಬೇಸಾಯ ಮಾಡುತ್ತಿದ್ದ ಬಗ್ಗೆ ಶ್ರೀಕಾಂತ ಆಚಾರ್ಯ ಸಾಕ್ಷಿದಾರರಾಗುತ್ತಾರೆ. ಅವರನ್ನು ನ್ಯಾಯಾಲಯದಲ್ಲಿ ವಿಚಾರಣೆ ಮಾಡಬಹುದು. ಅಬ್ಬಕ್ಕ ಪೂಜಾರ್ತಿ ಚಾಲಗೇಣಿ ಮಾಡುತ್ತಿದ್ದ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ನಿಪಿ.5 ವಿಭಾಗ ಪತ್ರದ ಮುಖೇನ ಬಂದ ಆಸ್ತಿಗಳಲ್ಲಿ ಈಗಾಗಲೇ ವಿಲೇವಾರಿ ಆಗಿರುವ ಆಸ್ತಿಗಳನ್ನು ಹೊರುತಪಡಿಸಿ ಉಳಿದ ಆಸ್ತಿಗಳಲ್ಲಿ ಮಾತ್ರ ನಮಗೆ ಪಾಲು ಇದೆ ಎಂದರೆ ಸರಿಯಲ್ಲ. ಸಾಕ್ಷಿ, ಎಲ್ಲಾ ಆಸ್ತಿಗಳಲ್ಲಿ ಪಾಲು ಇದೆ ಎನ್ನುತ್ತಾರೆ. ನಿಪಿ.5 ಕ್ಕೆ 1 ನೇ ಪ್ರತಿವಾದಿ ಪಕ್ಷಗಾರರು ಅಲ್ಲ ಎಂದರೆ ಸಾಕ್ಷಿ, ಅವರೇ ಭಾಗಿಯಾಗಿ ಸುಳ್ಳು ದಾಖಲೆ ಸೃಷ್ಟಿಸಿದ್ದಾರೆ ಎನ್ನುತ್ತಾರೆ. 1 ನೇ ಪ್ರತಿವಾದಿ ಶೇಷಿ ಪೂಜಾರ್ತಿಯವರಿಗೆ ಯಾವುದೇ ಮೋಸ ಮಾಡಿಲ್ಲ ಎಂದರೆ ಸರಿಯಲ್ಲ. ಎಲ್ಲಾ ದಸ್ತಾವೇಜುಗಳನ್ನು ಶೇಷಿ ಪೂಜಾರ್ತಿ ಸ್ವಇಚ್ಛೆಯಿಂದ ಮಾಡಿದ್ದು, 1 ನೇ ಪ್ರತಿವಾದಿಯ ಕುಮ್ಮಕ್ಕು ಇಲ್ಲ ಎಂದರೆ ಸರಿಯಲ್ಲ.

17. ನಿಪಿ.11 ವಿಭಾಗ ಪತ್ರ ಅಂದರೆ ಲಕ್ಷ್ಮೀ ಪೂಜಾರ್ತಿಯವರ ಕವರಿಗೆ ಸಂಬಂದಿಸಿದ್ದು ಕೂಡ ಕ್ರಮ ಬದ್ಧ ದಾಖಲೆ ಎಂದರೆ ಸರಿಯಲ್ಲ. ಪ್ರತಿವಾದಿ ನಂಬ್ರ.22 ರಿಂದ 24ರವರಿಗೆ ಸಂಬಂದಿಸಿದ ವಿಭಾಗ ಪತ್ರದ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಮಗೆ ದಾವಾ

ಆಸ್ತಿಯಲ್ಲಿ ಸಮಾನ ಹಕ್ಕು ಇದೆ. ನಮಗೆ 1/35 ಹಿಸ್ಸೆಯ ಹಕ್ಕು ಇದೆ. ಉಳಿದ ಹಿಸ್ಸೆಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇವೆ. ನಾವು ಹೇಳುವಂತೆ ಅಳಿಯ ಸಂತಾನ ಕುಟಂಬದ ಎಲ್ಲಾ ಪಕ್ಷಗಾರರನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಾವು ಸುಳ್ಳು ದಾವೆಯನ್ನು ಸಲ್ಲಿಸಿದ್ದು, ಕೇಳಿದ ನಿವೃತ್ತಿ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

**ಪ್ರತಿವಾದಿ ನಂಬ್ರ.25 ರವರ ಪರ ವಕೀಲರು ಮೇಲೆ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.**

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ ಉಡುಪಿ.